ಅಗಲಿಸಿ ಒಳಗೆ ಕಣ್ಣಾಯಿಸಿದೆ.

'ಏನಿದು?.... ಅರೆ.. ಮೊಬೈಲ್!.... ನೋ.. ನೋ.. ನೀವು.. ದಿಸ್ ಈಸ್ ಟೂ ಮಚ್...'

ಮೊಬೈಲ್ ಫೋನನ್ನು ಕೈಗೆ ತೆಗೆದುಕೊಂಡವಳು ಅದನ್ನು ಕವರ್‌ಗೆ ತಿರುಗಿ ಹಾಕಿ ಅವನತ್ತ ಚಾಚಿದೆ.

'ಸುಮ್ಮನೆ ಇಟ್ಟುಕೊಳ್ಳಿ.. ಕಾಣಿಕೆ ನಿರಾಕರಿಸಬಹುದು. ತಪ್ಪು ಕಾಣಿಕೆ ಒಪ್ಪಿಸಿಕೊಳ್ಳಲೇಬೇಕು... ತುಂಬಾ ದುಬಾರಿ ಏನಲ್ಲ... ದುಬಾರಿ ಫೋನನ್ನ ನಿಮ್ಮ ಯಜಮಾನ್ರ ಕೈಲಿ ಕೊಡಿಸ್ಕೊಳ್ಳಿ......ಈ ಚೀಪ್ ಫೋನ್ ಅನ್ನು ನಿಮ್ಮ ಕೈಲಿ ನೋಡಿದ ನಾಲ್ಕು ದಿನಕ್ಕೆ ನಿಮಗೆ ಅವ್ರು ಗ್ಯಾಲೆಕ್ಸಿ ನೋಟ್ ಕೊಡಿಸ್ತಾರೆ... ಆಗ ಇದನ್ನು ವಾಪಸ್ಸು ಕೊಡಿ... ಇದರಲ್ಲಿ ನನ್ನ, ಪ್ರೀತಿಯ ನಂಬರ್ ಎಂಟರ್ ಮಾಡಿದ್ದೇನೆ. ಸಿಮ್ ಕಾರ್ಡ್ ನನ್ನ ಹೆಸರಿನಲ್ಲಿ ತೊಗೊಂಡಿದ್ದೇನೆ. ನಿಮಗೆ ಬೇಕಾದಾಗ ಬೇಕಾದವರಿಗೆ ಫೋನ್ ಮಾಡುವ ಸ್ವಾತಂತ್ರ್ಯವಾದರೂ ಬೇಕ್ರಿ... ನಂಗೂ ಒಂದು ಫೋನ್ ಮಾಡಿ ಪ್ಲೀಸ್...'

ನನ್ನ ಉತ್ತರಕ್ಕೆ ಕಾಯದೆ... ಮುಖ, ತಲೆ ಎಲ್ಲಾ ಒರೆಸಿಕೊಂಡಿದ್ದು ದಂಡಕ್ಕೆ ಎನ್ನುವಂತೆ ಸುರಿಯುತ್ತಿದ್ದ ಮಳೆಯಲ್ಲಿ ನಡೆದು ಹೋದ......

'ವಿಶ್ವಾಸ್...' ಮೆಲ್ಲನೆ ಕರೆದೆ

ಗೇಟಿನ ಬಳಿ ನಿಂತು ಹಿಂತಿರುಗಿ, ನಕ್ಕು, ಕೈಬೀಸಿ ಹೊರಟು ಹೋದ ವಿಶ್ವಾಸ್.

'ಅಮ್ಮಾ... ಒಳಗೆ ಬರಬೇಕಂತೆ.. ದೊಡ್ಡಮ್ಮೋರು ಕರಿತಿದ್ದಾರೆ..' ನಿಂಗಿ ಕರೆದಾಗ ಅವಳತ್ತ ತಿರುಗಿದೆ.

'ನಡಿ ಬಂದೆ'

ಕವರ್ ಅನ್ನು ಸೆರಗಿನಲ್ಲಿ ಮರೆಮಾಡಿಕೊಂಡು ಒಳಗೆ ನಡೆದೆ.

'ನಿಮ್ಮಮ್ಮ ಅಪ್ಪ ನಾಳೆ ಸಂಜೆಯೇ ಬರ್ತಾರಂತೆ... ತಮ್ಮ ತಮ್ಮನ ಹೆಂಡತಿ ನಾಡಿದ್ದು ಬೆಳಗ್ಗೆ ಬರ್ತಾರಂತೆ... ಇವರ ಕೈಲೇ ಫೋನ್ ಮಾಡಿಸಿದೆ. ತುಂಬಾ ಖುಷಿಪಟ್ಟರು. ಅಳಿಯ ಎಂ.ಎಲ್.ಎ. ಆಗಿ ಮಂತ್ರಿ ಆಗ್ತಾರೆ... ಇವತ್ತೇ ಹಳ್ಳಿಗೆಲ್ಲಾ ಸಿಹಿ ಹಂಚ್ತೀನಿ ಅಂದ್ರು ನಿಮ್ಮಪ್ಪ... ಮೊದಲು ನಾಳೆ ಬನ್ನಿ.. ಇಲ್ಲೇ ದಂಡಿಯಾಗಿ ಸಿಹಿ ಮಾಡಿಸಿರ್ತೀವಿ.. ಹೋಗ್ತಾ ತೊಗೊಂಡು ಹೋಗಿ ಹಳ್ಳೀಲಿ ಹಂಚುವಿರಂತೆ ಅಂದೆ... ಪಾಪಾ... ಆಸೆ ಇರುತ್ತೆ...'

ನಾನು ನಿಂತಲ್ಲೇ ಕಲ್ಲು.... ಅವರು ಬದಲಾಗೋಲ್ಲ.. ಇವರೂ ಬದಲಾಗೋಲ್ಲ... ಅವರ ಗಿಂಜುವಿಕೆಗೆ ಕೊನೆಯಿಲ್ಲ.. ಇವರ ಅಹಂಕಾರಕ್ಕೆ ಎಲ್ಲೆಯಿಲ್ಲ...

'ಹೂಂ...'

'ನಾಡಿದ್ದಿಗೆ ಹೊಸ ಸೀರೆ ಇದೆಯಾ?'

ಮಾವನ ಮುಂದೆ, ಅವರ ಬಳಿ ಹೇಳಿದ ಹಾಗೆ ನಾನು ಇರೊಲ್ಲ ನಾಡಿದ್ದು ಅಂತ ನಾನು ಹೇಳಲಿ ಎಂದು ಅತ್ತೆಯ ಪ್ರಯತ್ನ ಇದು... ನನಗೆ ತಿಳಿಯು ವುದಿಲ್ಲವೇ?. ಆದರೆ ಮಾವನ ಮುಂದೆ ಅಥವಾ ಇವರ ಮುಂದೆ ಈಗಲೇ ಬಾಯಿ ಬಿಟ್ಟರೆ ಕೆಲಸ ಕೆಟ್ಟಂತೆಯೇ... ನಾನು ಹೊರಡಲು ಆಗದಂತೆ... ಊರಿನಿಂದ ಬೆಂಗಳೂರಿಗೆ ಹೋಗುವ ಬಸ್ಸುಗಳನ್ನೇ ನಿಲ್ಲಿಸಬಲ್ಲರು...

'ಇದೆ..'

ತಲೆಯಾಡಿಸಿ ಸರಸರನೆ ಮೆಟ್ಟಿಲು ಹತ್ತಿ ಕೋಣೆ ಹೊಕ್ಕು ಬಾಗಿಲು ಹಾಕಿ ಅದಕ್ಕೆ ಒರಗಿ ನಿಂತು.. ಕವರ್‌ನಿಂದ ಮೊಬೈಲ್ ತೆಗೆದು ಕೈಯಲ್ಲಿ ಹಿಡಿದು ಅದರತ್ತ ನೋಡಿದೆ. ಕೆಂಪು ಬಣ್ಣ... ಪ್ರೇಮದ ಸಂಕೇತ.......

ಕೈಯಲ್ಲೇ ನಡುಗಿತು ಮೊಬೈಲ್... ನಡುಗಿದ್ದು ಕೈಯೋ..

ಮೊಬೈಲೋ...? ನಮೂದಿಸಿದ್ದನ್ನು ನೋಡಿದೆ... ದೊಡ್ಡ ಅಕ್ಷರದಲ್ಲಿ ವಿಶ್ವಾಸ್ ಕಾಲಿಂಗ್ ಎಂದು ಸ್ಕ್ರೀನಿನ ಮೇಲೆ ಭಿತ್ತರಿಸುತಿತ್ತು. ತೋರು ಬೆರಳಿನಿಂದ ಸ್ವಿಚ್ ಆನ್ ಮಾಡಿದೆ.

'ಹಲೋ...'

'ನಿಮ್ಮ ಮೊಬೈಲಿಗೆ ಮೊದಲ ಕರೆ ನನ್ನದಿರಬೇಕು ಅಂತ ಮಾಡಿದೆ ಅಷ್ಟೇ... ತುಂಬಾ ಹಿಂಜರಿಯಬೇಡಿ... ಹೆದರಬೇಡ್ರಿ... ನಿಮ್ಗೆ ಬೇಕಾದ್ದು ಮಾಡಿ...... ಧೈರ್ಯ ತಂದುಕೊಳ್ಳಿ..'.

'ಯಾಕೆ ಹೀಗೆಲ್ಲಾ ಹೇಳ್ತಾ ಇದೀರಿ?' ಮೆಲ್ಲನೆ ಕೇಳಿದೆ.

'ನೀವ್ಯಾಕೆ ಹೆದರಿದ್ದೀರಿ?.... ಏನು ಪ್ರಾಬ್ಲಂ?...'

'ಐಯ್ಯಾಮ್ ಓಕೆ'– ಉಗುಳು ನುಂಗಿದೆ.

'ಬೇಡ... ನಿಮಗೆ ಹೇಳಬೇಕು ಅನ್ನಿಸದಿದ್ದರೆ ಹೇಳಬೇಡಿ... ಪ್ರೀತಿಗೆ ಫೋನ್ ಮಾಡಿ.... ಆದರೆ ನಾಳೆಯಿಂದ ಮೂರು ವಾರ ಅವಳು ಭಾರತದಲ್ಲಿಯೇ ಇರೊಲ್ಲ... ನಿಮಗೆ ಬೇರೆ ಯಾರೂ ಫ್ರೆಂಡ್ ಇಲ್ವಾ?'

ಅವನ ಪ್ರಶ್ನೆ ಕಂಗಳಿಂದ ಕಂಬನಿ ಕೆನ್ನೆಯ ಮೇಲೆ ಹರಿಯಿತು.

'ನಾನು ನಿಮ್ಮ ಫ್ರೆಂಡ್ ಅಂದುಕೊಳ್ಳಿ.. ಏನಾದ್ರು ಹೆಲ್ಪ್ ಬೇಕಿದ್ರೆ ಕೇಳಿ.... ಈಗ ಫೋನ್ ಇಡ್ತೀನಿ..... ಐ ಕಾನ್ಟ್ ಬೇರ್ ಟು ಸಿ ಯು ಕ್ರೈ'

ಅತ್ತ ಕಡೆ ಫೋನ್ ಇಟ್ಟ ಸದ್ದು... ಮೊಬೈಲನ್ನು ಭದ್ರವಾಗಿ ಹಿಡಿದು ಕಣ್ಣು ಮುಚ್ಚಿದೆ.

ನಾನು ಅಳುತ್ತಿರುವೆ ಎಂದು ಹೇಗೆ ತಿಳಿಯಿತು ಅವನಿಗೆ? ಈ ತರಹ ನನ್ನ ಮಾನ, ನನ್ನ ದುಃಖ, ನನ್ನ ನೋಟ ಅರ್ಥ ಮಾಡಿಕೊಳ್ಳುವ ಜೊತೆಗಾರ ಸಿಕ್ಕಿದ್ದರೆ ನನಗೆ......

ಕಟ್ಟಿಕೊಂಡಿರುವವನು.. ನನ್ನ ಮಾನವಿರಲಿ ನನ್ನ ಮಾತೇ ಅರ್ಥ ಮಾಡಿಕೊಳ್ಳದಂತಹವನು.

ನಿಜ... ಹಾಗೆಂದು... ಹಾಗೆಂದು... ಎರಡು ಮಕ್ಕಳೂ ಆದ ಮೇಲೆ ಬಿಟ್ಟುಬಿಡಲಾಗುತ್ತದೆಯೇ?.... ಪಾಲಿಗೆ ಬಂದಿದ್ದು ಪಂಚಾಮೃತ ಎಂದು ಜೀವಿಸಬಿಡಬೇಕಲ್ಲವೇ?

ಜೊತೆಗೆ.. ಈಗ ಬಿಟ್ಟರೂ ಒಂಟಿ ಜೀವನ ತಾನೇ. ಅರ್ಥಮಾಡಿ ಕೊಳ್ಳುತ್ತಾನೆ, ಚೆನ್ನಾಗಿ ಮಾತಾಡುತ್ತಾನೆ ಅಂತ ವಿಶ್ವಾಸನ ಹಿಂದೆ ಹೋಗಲಾಗುತ್ತದೆಯೇ?

ಏನೋ ದುಃಖದಲ್ಲಿರುವ ಹೆಂಗಸು, ಕೊಂಚ ಪೆದ್ದು ಪೆದ್ದಾಗಿ ಇದ್ದಾಳೆ. ಮನೆಯವರೆಲ್ಲಾ ಅವಳನ್ನು ಕಡೆಗಾಣಿಸಿರುವುದರಿಂದ ಒಂದೆರಡು ಒಳ್ಳೆಯ ಮಾತಾಡಿದರೆ ಬಲೆಗೆ ಬೀಳ್ತಾಳೆ... ಎಂದೇನಾದರೂ ಇದೆಯೇ ಅವನ ಮನಸ್ಸಿನಲ್ಲಿ..... ನನ್ನ ಯೋಚನಾ ಧಾಟಿಗೆ ಬೆದರಿ ತಲೆ ಕೊಡವಿಕೊಂಡೆ ಛೇ.. ಪಾಪಾ.. ಅವನ ಸ್ವಭಾವವೇ ಹಾಗೆ ಅಷ್ಟೇ... ಇಲ್ಲದ್ದು ಕಲ್ಪಿಸಿಕೊಳ್ಳಬಾರದು ರಾಜಕೀಯಕ್ಕೆ, ನಾನು ಅಷ್ಟು ಬೇಡ ಎಂದು ಅವಲತ್ತುಕೊಂಡರೂ ಇಳಿಯುತ್ತಿರುವ ಇವರ ಮೇಲಿನ ಕೋಪಕ್ಕೆ, ನಿಂಗೆ ನನ್ನ ಬಿಟ್ಟರೆ, ಈ ಮನೆ ಬಿಟ್ಟರೆ ಬೇರೆ ಗತಿ ಇಲ್ಲ ಎಂದು ಇವರು ತೋರುತ್ತಿರುವ ಅಹಂಭಾವಕ್ಕೆ ಉತ್ತರವಾಗಿ ಈ ಮನೆಯನ್ನು, ಇವರನ್ನು ಬಿಟ್ಟು ಒಂಟಿಯಾಗಿ ಬದುಕಿ ತೋರಿಸಬೇಕು ಎಂಬ ಛಲ ಅಷ್ಟೇ!... ಆದರೆ ಆದರೆ.. ಇದೆಲ್ಲದರ ಮಧ್ಯೆ ಈ ವಿಶ್ವಾಸ ಹೇಗೆ, ಯಾಕೆ ನುಸುಳಿ ಬರುತ್ತಿದ್ದಾನೆ?.... ಅವನ ಸ್ವಭಾವವೇ ಹಾಗಿರಬೇಕು... ಎಲ್ಲರನ್ನು ಚೆಂದಾಗಿ ಮಾತಾಡಿಸುತ್ತಾನೆ... ಇಲ್ಲದ ಅರ್ಥ ಕಲ್ಪಿಸಿಕೊಳ್ಳುತ್ತಿರುವುದು ನನ್ನ ತಪ್ಪು.....

ನಾಳೆ ಅಪ್ಪ ಅಮ್ಮ ಬರುವ ಮುನ್ನ ಇಲ್ಲಿಂದ ಹೊರಟು ಬಿಡಬೇಕು... ಚುನಾವಣೆ ಪ್ರಚಾರಕ್ಕೂ ನೀನು ಇರುವ ಅವಶ್ಯಕತೆ ಇಲ್ಲ... ನಾಳೆಯೇ ಹೋಗು ಎಂದಿರಲಿಲ್ಲವೇ ಇವರು...

ಪ್ರತಿಯೊಂದು ತಾಪತ್ರಯವೇ.. ಪ್ಯಾಕ್ ಮಾಡಿಕೊಳ್ಳುವುದು ಏನು?.... ದುಡ್ಡು ಎಷ್ಟು ಇಟ್ಟು ಕೊಳ್ಳುವುದು? ಒಡವೆಗಳನ್ನು ತೆಗೆದುಕೊಂಡು ಹೋಗುವುದೇ ಬಿಡುವುದೇ?... ಬಸ್ ಸ್ಟ್ಯಾಂಡಿಗೆ ಹೋಗುವುದು ಹೇಗೆ?... ಎಲ್ಲರೂ ಏಳುವ ಮುನ್ನ ಹೋಗುವುದೇ ಅಥವಾ ಎಲ್ಲರ ಮುಂದೆ ಸೂಟ್‌ಕೇಸ್ ಹಿಡಿದು ಬೈ ಎಂದು ಹೇಳಿ ಹೋಗುವುದೇ?.... ಮಕ್ಕಳಿಗೂ ಹೇಳದೆ ಹೋಗುವುದು ತಪ್ಪಾಗುವುದಿಲ್ಲವೆ?.... ಅವರಿಬ್ಬರೂ ನನ್ನೊಂದಿಗೆ ಬರುವುದಿಲ್ಲ ಎಂದು ನಾನು ಅಂದುಕೊಂಡಿರುವುದು... ಅಮ್ಮ ನೀನು

## ನೆನಪು

ಕನಸುಗಳ ಮೆರವಣಿಗೆಯಲಿ
ಕಳೆದು ಹೋದ ಮುಖಗಳು
ಬಿಟ್ಟು ಹೋಗಿವೆ
ಹೆಜ್ಜೆ ಗುರುತುಗಳನು
–ರಾಂಚಂದ್ರ, ಕೊಪ್ಪಲು



ಶಿಲ್ಪಾ